ದಿನಾಂಕ 13-02-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ 5 ರಿಂದ 7 ನೇ ಪ್ರತಿವಾದಿಯರ ಪರ ಶ್ರೀ ಬಿ.ಎಸ್.ಡಿ ವಕೀಲರಿಂದ.**

ನಾನು ಈ ದಾವೆಯನ್ನು ಈಶಪ್ಪ ಹಾಗೂ ಶರಣಪ್ಪ ರವರ ವಿರುದ್ಧ ಹೂಡಿರುತ್ತೇನೆ. ನಾನು ಈ ಇಬ್ಬರನ್ನು ಹೊರತುಪಡಿಸಿ ಬೇರೆಯವರ ವಿರುದ್ಧ ಈ ದಾವೆ ಹೂಡಿಲ್ಲ. ನಾನು ಈ ದಾವೆಯಲ್ಲಿ ಎಷ್ಟು ಜನರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಾನು ಈ ದಾವೆಯನ್ನು ಜಮೀನಿನಲ್ಲಿ ಭಾಗಬೇಕು ಎಂದು ಹೂಡಿರುತ್ತೇನೆ. ದಾವಾ ಆಸ್ತಿಗಳ ಸರ್ವೆ ನಂಬರ ನನಗೆ ಗೊತ್ತಿಲ್ಲ ಆದರೆ ಒಟ್ಟು 35 ಎಕರೆ ಜಮೀನಿನ ಮೇಲೆ ಹೂಡಿರುತ್ತೇನೆ ಎಂದು ಹೇಳುತ್ತಾರೆ. 35 ಎಕರೆ ಜಮೀನಿನಲ್ಲಿ ಯಾವ ಯಾವ ಸರ್ವೆ ನಂಬರಗಳು ಇವೆ, ಅವುಗಳ ವಿಸ್ತೀರ್ಣ ಮತ್ತು ಅವುಗಳು ಯಾರ ಯಾರ ಹೆಸರಿನಲ್ಲಿ ಇರುತ್ತವೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಹಾಗೂ ನನ್ನ ವಾದ ಪತ್ರದಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ ಆದರೆ ಬರೆದುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಯಾವ ಯಾವ ಸರ್ವೆ ನಂಬರಗಳು ಇವೆ ಮತ್ತು ಅವುಗಳ ವಿಸ್ತೀರ್ಣಗಳ ಬಗ್ಗೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನಾನು ಊರಿಗೆ ಹೋಗಿಲ್ಲ ಎಂದು ಹೇಳುತ್ತಾರೆ.

ನನ್ನ ಮದುವೆಯಾಗಿ 37 ವರ್ಷ ಆಗಿರುತ್ತದೆ. ನನ್ನ ತಂದೆಯ ಹೆಸರು ರಾಮನಗೌಡ ಆಗಿರುತ್ತದೆ. ರಾಮನಗೌಡ ರವರ ತಂದೆಯ ಹೆಸರು ಬಸನಗೌಡ ಆಗಿರುತ್ತದೆ. ರಾಮನಗೌಡ ಹಾಗೂ ಅವರ ತಂದೆ ಬಸನಗೌಡ ರವರು ತೀರಿಕೊಂಡಿರುತ್ತಾರೆ. ಬಸನಗೌಡ ರವರು ತೀರಿಕೊಂಡು ಎಷ್ಟು ವರ್ಷ ಆಗಿರುತ್ತದೆ ಗೊತ್ತಿಲ್ಲ. ಬಸನಗೌಡ ರವರಿಗೆ ನನ್ನ ತಂದೆ ಒಬ್ಬರೇ ಮಗ ಇದ್ದು ಬಸನಗೌಡ ರವರಿಗೆ ಹೆಣ್ಣುಮಕ್ಕಳು ಇರಲಿಲ್ಲ. ರಾಮನಗೌಡ ರವರಿಗೆ 03 ಜನ ಹೆಂಡತಿಯರು ಇರುತ್ತಾರೆ. ರಾಮನಗೌಡ ರವರ ಮೊದಲನೇ ಹೆಂಡತಿ ತಾಯಮ್ಮ ರವರು ಇದ್ದು ಅವರು ತೀರಿಕೊಂಡಿರುತ್ತಾರೆ. ತಾಯಮ್ಮ ರವರಿಗೆ ಇಬ್ಬರು ಮಕ್ಕಳು ಇದ್ದು ಅವರು 4 ಮತ್ತು 5 ನೇ ಪ್ರತಿವಾದಿಗಳು ಆಗಿರುತ್ತಾರೆ. ರಾಮನಗೌಡ ರವರ 2 ನೇ ಹೆಂಡತಿ ಪರಮ್ಮ ಆಗಿದ್ದು ಅವರು ನನ್ನ ತಾಯಿ ಆಗಿರುತ್ತಾರೆ. ಪರಮ್ಮ ಹಾಗೂ ತಾಯಮ್ಮ ರವರು ಅಕ್ಕ-ತಂಗಿಯರು ಆಗಿರುತ್ತಾರೆ. ತಾಯಮ್ಮ ರವರು ತೀರಿಕೊಂಡು ಎಷ್ಟು ವರ್ಷ ಆಗಿರುತ್ತದೆ ಗೊತ್ತಿಲ್ಲ. ನಾವು ಚಿಕ್ಕವರಿರುವಾಗ ಪರಮ್ಮ ರವರು ತೀರಿಕೊಂಡಿರುತ್ತಾರೆ. ಪರಮ್ಮ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇರುತ್ತಾರೆ, ಅವರು ನಾನು, 10 ನೇ ಪ್ರತಿವಾದಿ ಮತ್ತು ಮಹಾದೇವಮ್ಮ ಆಗಿರುತ್ತೇವೆ. 9 ನೇ ಪ್ರತಿವಾದಿ ಮಹಾದೇವಮ್ಮ ರವರ ಮಗ ಆಗಿರುತ್ತಾರೆ. ರಾಮನಗೌಡ ರವರ 3 ನೇ ಹೆಂಡತಿ 1 ನೇ ಪ್ರತಿವಾದಿ ಆಗಿರುತ್ತಾರೆ. 2 ಮತ್ತು 3 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ಮಕ್ಕಳು ಆಗಿರುತ್ತಾರೆ. ಪರಮ್ಮ ಹಾಗೂ 1 ನೇ ಪ್ರತಿವಾದಿ ರಾಮನಗೌಡ ರವರನ್ನು ಯಾವಾಗ ಮದುವೆ

ಆಗಿರುತ್ತಾರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನನ್ನ ವಾದ ಪತ್ರ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿಯೂ ಹೇಳಿಲ್ಲ. ಪ್ರತಿವಾದಿಗಳು ಈಗ ಒಟ್ಟು ಕುಟುಂಬದಲ್ಲಿ ಇರುತ್ತಾರೋ ಅಥವಾ ವಿಭಾಗ ಆಗಿರುತ್ತಾರೋ ನನಗೆ ಗೊತ್ತಿಲ್ಲ ಆದರೆ ಮೊದಲು ಎಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದರು ಎಂದು ಹೇಳುತ್ತಾರೆ. ಪ್ರತಿವಾದಿಗಳಿಗೆ ಬೊಮ್ಮನಾಳ ನಲ್ಲಿ 03 ಮನೆಗಳು ಇರುತ್ತವೆ. ಯಾವ ಮನೆಯಲ್ಲಿ ಯಾರು ಇರುತ್ತಾರೆ ನನಗೆ ಗೊತ್ತಿಲ್ಲ ಕಾರಣ ನಾನು ಊರಿಗೆ ಹೋಗಿಲ್ಲ. ನಾನು ಬೊಮ್ಮನಾಳ ಊರಿಗೆ ಕಡೆಯ ಬಾರಿ 10-15 ವರ್ಷಗಳ ಹಿಂದೆ ಹೋಗಿದ್ದೆ. ನಂತರ ನಾನು ಬೊಮ್ಮನಾಳಗೆ ಹೋಗಿಲ್ಲ ಮತ್ತು ಪ್ರತಿವಾದಿಗಳ ಜೊತೆ ಸಂಪರ್ಕ ಇರುವುದಿಲ್ಲ. ದಾವಾ ಆಸ್ತಿಗಳನ್ನು ನನ್ನ ತಂದೆ ಗಳಿಸಿದ್ದು ಅವುಗಳನ್ನು ಯಾರು ಯಾರು ಯಾವಾಗ ತಮ್ಮಗಳ ಹೆಸರಿಗೆ ಮುಟೇಶನ್‌ಗಳನ್ನು ಮಾಡಿಸಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಯಾರು ಯಾವಾಗ ಮುಟೇಶನ್ ಮಾಡಿಸಿಕೊಂಡಿರುತ್ತಾರೆ ಎಂಬುದರ ಬಗ್ಗೆ ವಾದ ಪತ್ರ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಾನು ಹೇಳಿಲ್ಲ. ಯಾವಾ ದಾವಾ ಆಸ್ತಿಗಳನ್ನು ಯಾರು ಸಾಗುವಳಿ ಮಾಡುತ್ತಿದ್ದಾರೆ ನನಗೆ ಗೊತ್ತಿಲ್ಲ. ನನಗೆ ದಾವಾ ಆಸ್ತಿಗಳ ಚೆಕ್ಬಂದಿ ಗೊತ್ತಿಲ್ಲ ಮತ್ತು ನಾನು ದಾವಾ ಆಸ್ತಿಗಳನ್ನು ನೋಡಿಲ್ಲ. ನಾನು ಚಿಕ್ಕವಳಿದ್ದಾಗ ಅಂದರೆ ನನ್ನ ಮದುವೆಯಾಗುವ ಮೊದಲು ದಾವಾ ಆಸ್ತಿಗಳ ಕಡೆ ಹೋಗಿದ್ದು ನಂತರ ಎಂದಿಗೂ ಹೋಗಿಲ್ಲ. ನನ್ನ ತಂದೆಯ ಆಸ್ತಿಗಳಲ್ಲಿ ಭಾಗ ಬೇಕು ಎಂದು ಈ ದಾವೆಯನ್ನು ಹೂಡಿದ್ದು ನನ್ನ ತಂದೆ ಎಲ್ಲರಿಗೂ ಆಸ್ತಿಗಳನ್ನು ಕೊಟ್ಟಿದ್ದರಿಂದ ನನಗೂ ಆಸ್ತಿ ಬೇಕು ಎಂದು ಈ ದಾವೆ ಹೂಡಿರುತ್ತೇನೆ. ನನ್ನ ತಂದೆ 2 ರಿಂದ 4 ನೇ ಪ್ರತಿವಾದಿಗಳಿಗೆ ಆಸ್ತಿಗಳನ್ನು ಕೊಟ್ಟಿರುವುದಾಗಿ ನಾನು ಕೇಳಿ ತಿಳಿದುಕೊಂಡಿರುತ್ತೇನೆ. ಈ ಬಗ್ಗೆ 2 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ದಾಖಲೆಗಳು ಆಗಿರುತ್ತದೆಯೋ ಇಲ್ಲವೋ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲೀಗಾಗಿ ಕೋರಿಕೆಯ ಮೇರೆಗೆ ಮುಂದೂಡಲಾಯಿತು**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.